ಬಂದನೇನೋ ಅನಿಸಿ ನಾನು ಅವನತ್ತ ಚೆನ್ನಾಗಿ ತಿರುಗಿ ಕುಳಿತೆ. ಅವನು ಹೇಳತೊಡಗಿದ...

'ಸರ್ ನಮ್ಮೂರು ಚಿಕ್ಕದು. ಆಲ್ಮೋಸ್ಟ್ ಎಲ್ಲರಿಗೂ ಒಂದಲ್ಲ ಒಂದು ಚೂರು ಗದ್ದೆ ಮನೆ ತೋಟ, ಬಾವಿ, ದನ ಕರು ಎಲ್ಲ ಇರೋದೇ. ತೀರ ಹೊರಗೆ ಹೋಗಿ ದುಡಿದರೇನೇ ಬದುಕು ಅನ್ನುವಂತಿರುವವರು ಇರಲಿಲ್ಲ. ಆದರೆ ಅಂಥದ್ದರಲ್ಲಿ ಅವನೊಬ್ಬ ನಮ್ಮೂರಿನಿಂದ ಸುಮಾರು 50 ಕಿ.ಮೀ. ದೂರದ ಪಟ್ಟಣದಲ್ಲಿ ಕೆಲಸಕ್ಕೆ ಹೊರಟು ನಿಂತ. ಅವನು ಎಲೆಕ್ಟ್ರಿಕ್ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದ. ಅವನು ಕೆಲಸಕ್ಕೆ ಹೊರಟ ಆ ಸಮಯದಲ್ಲಿ ನಮ್ಮೂರಿಗಿನ್ನೂ ಕರೆಂಟ್ ಸಪ್ಲೈ ಇರಲಿಲ್ಲ. ಅಂಥದ್ದರಲ್ಲಿ ಅವನೊಬ್ಬ ಕರೆಂಟಾಫೀಸಿನಲ್ಲಿ ಕೆಲಸ ಮಾಡುತ್ತಾನೆಂದರೆ ಎಲ್ಲರಿಗೂ ವಿಚಿತ್ರ ಕುತೂಹಲ ಕಾಡುತ್ತಿತ್ತು. ಅವನಿಗೆ ಇರುವುದರಲ್ಲಿ ತುಸು ಹೆಚ್ಚೇ ಅನಿಸುವಷ್ಟು ಕಾಫಿತೋಟ, ಏಲಕ್ಕಿ ತೋಟ, ಗದ್ದೆ, ಬಯಲು ಎಲ್ಲ ಇದ್ದವು. ಅದನ್ನೇ ನ್ಯಾಯವಾಗಿ ಉತ್ತುಬಿತ್ತು ಕೊಯ್ಲು ಮಾಡಿದ್ದರೆ ಅವನಿಗೆ ತಿಂದು ಮಿಗುವಷ್ಟಿದ್ದರೂ ಅವನು ಹಾಗೆ ಕೆಲಸಕ್ಕೆ ಹೋಗುವುದು ಒಂದು ರೀತಿ ತಮಾಷೆಯೆನಿಸುತ್ತಿತ್ತು. ಬೆಳಗಿನ ಆರು ಗಂಟೆಗೆಲ್ಲ ಗಂಡಸೊಬ್ಬ ಊಟದ ಕ್ಯಾರಿಯರ್ ಎತ್ತಿಕೊಂಡು ಆಫೀಸ್ ಬ್ಯಾಗ್ ಜೋತಾಡಿಸಿಕೊಂಡು ಕೆಲಸಕ್ಕೆ ಹೋಗುವುದನ್ನು ಊರೇ ತುಸು ಗೇಲಿಯಿಂದ ನೋಡುತ್ತಿತ್ತು. ಅದಷ್ಟೇ ಆಗಿದ್ದರೆ ಬಹುಶಃ ನಾನಿವತ್ತು ಈ ಕತೆ ಹೇಳುವುದು ಬೇಕಿರಲಿಲ್ಲ ಆದರೆ ಆಮೇಲೆ ಕೆಲದಿನಗಳ ಬಳಿಕ ನಮ್ಮೂರಿನ ಒಬ್ಬ ಹೆಂಗಸೂ ಕೆಲಸಕ್ಕೆ ಹೋಗಲು ಶುರು ಮಾಡಿದಾಗ ಮಾತ್ರ ನಿಜಕ್ಕೂ ಹೆಚ್ಚಿಗೇ ಗುಲ್ಲಾಯಿತು. ಅವಳು ಯಾವಾಗ ಕೆಲಸಕ್ಕೆ ಅರ್ಜಿ ಹಾಕಿದಳು, ಯಾವಾಗ ಸೇರಿಕೊಂಡಳೆಂಬುದು ಸ್ವತಃ ಅವಳ ಗಂಡನಿಗೇ ಗೊತ್ತಾಗಿರಲಿಲ್ಲ. ಹೆರಿಗೆಗೆ ತವರಿಗೆ ಹೋಗಿದ್ದವಳು ಮರಳಿ ಬರುವಾಗ ಕೆಲಸದೊಡನೆ ಬಂದಿದ್ದಳು. ಮಜವೆಂದರೆ ಅವಳಿಗೂ ಎಲೆಕ್ಟ್ರಿಕ್ ಬೋರ್ಡಿನಲ್ಲೇ ಕೆಲಸ! ಅವಳು ಬೆಳಬೆಳಗ್ಗೇ ಎದ್ದು ಮನೆಯ ಅಷ್ಟೂ ಕೆಲಸ ಮುಗಿಸಿ, ಆಳುಮಕ್ಕಳಿಗೆ ಅಡುಗೆ ಮಾಡಿಟ್ಟು ಗಂಡನಿಗೆ ಕಾಫಿ ಮಾಡಿ ಫ್ಲಾಸ್ಕಿನಲ್ಲಿ ತುಂಬಿಟ್ಟು ಬೆಳಗಿನ ಮೊದಲ ಬಸ್ಸಿಗೆ ರೆಡಿಯಾಗಿ ಹೊರಟರೆ ಇನ್ನು ಬರುವುದು ಊರಿಗೆ ಕೊನೆಯದಾಗಿ ಹಿಂತಿರುಗುವ ಅದೇ ಬಸ್ಸಿಗೆ. ಭಾನುವಾರ ಬಿಟ್ಟರೆ ಹಬ್ಬಹರಿದಿನಕ್ಕೆಲ್ಲ ರಜೆ. ಉಳಿದಂತೆ ಅವಳು ಯಾವತ್ತೂ ರಜೆ ತೆಗೆದುಕೊಳ್ಳುತ್ತಿರಲಿಲ್ಲ. ಮೊದಮೊದಲು ಹೇಗಿತ್ತು ನಂಗೆ ಅಂದಾಜಾಗುವುದಿಲ್ಲ ಸರ್. ಆದರೆ ಆಮೇಲಾಮೇಲೆ ಅದೂ ತುಂಬ ಬೇಗನೇ ಅವನು ಮತ್ತು ಅವಳು ಹತ್ತಿರವಾಗಿ ಬಿಟ್ಟರು. ಅವರು ದಿನವೂ ಹೋಗಿಬರುತ್ತಿದ್ದ ಭಾಗ್ಯಲಕ್ಷ್ಮಿ ಬಸ್ಸಿನ ಮುಂದಿನ

**ಇವಳು ಕೆಲಸಕ್ಕೆ ಸೇರಿ ಒಂದರಡು ವರ್ಷಗಳ ಬಳಿಕ ಮತ್ತೊಂದು ಮಗು ಹಡೆದಳು. ಅದಂತೂ ನಿಶ್ಚಯ ಅವನಿಗೆ ಹುಟ್ಟಿದ್ದೇ ಹೊರತು ಗಂಡನಿಗಲ್ಲ ಎಂದಿತು ಊರು. ಆದರೆ ಅದಕ್ಕೆ ಸಂಬಂಧಪಟ್ಟ ಯಾರೂ ಯಾವ ವಿವರಣೆಯನ್ನೂ ಕೊಡಹೋಗದೆ ಅದೆಲ್ಲವನ್ನೂ ನಿರ್ಲಕ್ಷಿಸಿಬಿಟ್ಟರು. ಎಲ್ಲರಿಗೂ ಅವಳ ಗಂಡನ ಅಲಕ್ಷ್ಯದ ಕುರಿತ ಅಚ್ಚರಿಯಿತ್ತು.**